ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 09–03–2019

# ಪತ್ರಿಕಾ ಪ್ರಕಟಣೆ

## TOLL-FREE NUMBER ESTABLISHED TO REGISTER COMPLAINTS ON EXCISE IRREGULARITIES

**BENGALURU, MARCH 8 ( KARNATAKA INFORMATION ) :**

**The Department of Excise has established and activated a Toll-Free Number : 1-800-425-2550 at its Head Office in Shanthi Nagar in Bengaluru to register complaints from public pertaining to excise irregularities. This telephone number works 24 hours in a day and on all the days in the week, continuously. Public may call this telephone number and register any excise irregularities noticed by them, says an official press release.**

## ಅಬಕಾರಿ ಅಕ್ರಮಗಳ ಕುರಿತಂತೆ ದೂರು ದಾಖಲಿಸಲು ಶುಲ್ಕ–ರಹಿತ ದೂರವಾಣಿ ಸ್ಥಾಪನೆ

ಬೆಂಗಳೂರು, ಮಾರ್ಚ್ 9 ( ಕರ್ನಾಟಕ ವಾರ್ತೆ ) :

ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬೆಂಗಳೂರಿನ ಶಾಂತಿನಗರದ ರಾಜ್ಯ ಅಬಕಾರಿ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಅಬಕಾರಿ ಅಕ್ರಮಗಳ ಕುರಿತು ಸಾರ್ವಜನಿಕರು ದೂರು ದಾಖಲಿಸಲು ಅನುಕೂಲವಾಗುವಂತೆ ಶುಲ್ಕ–ರಹಿತ ದೂರವಾಣಿ ಸಂಖ್ಯೆ : 1–800–425–2550 ಸ್ಥಾಪಿಸಿ ಚಾಲನೆ ನೀಡಲಾಗಿದೆ.ಈ ದೂರವಾಣಿ ಸಂಖ್ಯೆಯು ದಿನದ 24 ಗಂಟೆಗಳೂ ಹಾಗೂ ವಾರದ ಏಳೂ ದಿನಗಳೂ ಸತತವಾಗಿ ಕಾರ್ಯನಿರ್ವಹಿಸಲಿದೆ. ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಅಬಕಾರಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಅಕ್ರಮಗಳು ಕಂಡು ಬಂದಲ್ಲಿ ಸಾರ್ವಜನಿಕರು ಈ ದೂರವಾಣಿ ಸಂಖ್ಯೆಗೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಎಸಿಬಿ ದಾಳಿ

**ಬೆಂಗಳೂರು, ಮಾರ್ಚ್ 9 ( ಕರ್ನಾಟಕ ವಾರ್ತೆ ) :**

ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಶೆಟ್ಟಿಕೆರೆ ಗ್ರಾಮದ ನಿವಾಸಿಯೊಬ್ಬರು ತಮ್ಮ ಪಿತ್ರಾರ್ಜಿತವಾದ ಜಮೀನುಗಳನ್ನು ವಿಭಾಗ ಪತ್ರದಂತೆ ಹಂಚಿಕೆ ಮಾಡಿಕೊಂಡು ಶಿಡ್ಲಘಟ್ಟ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದು, ಜಮೀನಿನ ಖಾತೆ ಮಾಡಿಕೊಡಲು ಶಿಡ್ಲಘಟ್ಟ ತಾಲ್ಲೂಕು ಕಛೇರಿಯ ಮುಖಾಂತರ ಶೆಟ್ಟಿಗೆರೆ ಕಂದಾಯ ವೃತ್ತದ ಗ್ರಾಮಲೆಕ್ಕಿಗರಾದ ಕು॥ಎ.ಎನ್.ಪ್ರಿಯಾಂಕ ರವರ ಬಳಿಗೆ ಬಂದಿರುತ್ತದೆ. ಎ.ಎನ್.ಪ್ರಿಯಾಂಕರವರು ಖಾತೆ ಬದಲಾವಣೆ ಮಾಡಿಕೊಡಲು ಶಿಫಾರಸ್ಸು ಮಾಡಲು ರೂ.5,000/– ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:08/03/2019 ರಂದು ಕು॥ಎ.ಎನ್.ಪ್ರಿಯಾಂಕ ರವರು ದೂರುದಾರರಿಂದ ರೂ.3,000/– ಲಂಚದ ಹಣವನ್ನು ಪಡೆಯುತ್ತಿದ್ದಾಗ ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿತರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.